# ಬದರಿನಾಥ್ ಮನೆಯಲ್ಲಿ ನಿತ್ಯ ಕಲ್ಯಾಣ ಕಾರ್ಯಕ್ರಮ

ಚಿತ್ರದುರ್ಗ ಆ. 30 - ನಿತ್ಯ ಸಮಾಜಮುಖಿಯಾಗಿ ಅಂತರ್ಮುಖಿಯಾಗಿ ಅಧ್ಯಯನಮುಖಿಯಾಗಿ ಇರುವವರು ವಶೀಕರಣ ವಿದ್ಯೆಗೆ ಒಳಗಾಗುವುದಿಲ್ಲ. ದುರ್ಬಲ ವ್ಯಕ್ತಿತ್ವದವರು ಮಾತ್ರ ವಶೀಕರಣಕ್ಕೆ ಒಳಗಾಗುತ್ತಾರೆ. ಇದು ಹುಸಿತನದ ವಿದ್ಯೆ. ಇದರ ಮೇಲೆ ಗಟ್ಟಿ ಜೀವನ ಕಟ್ಟಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಅಭಿಪ್ರಾಯಪಟ್ಟರು.

ನಗರದ ವೀರಶೈವ ಲಿಂಗಾಯತ ಹೇಮರೆಡ್ಡಿ ಮಲ್ಲಮ್ಮ ಸಮಾಜದ ಸಹಯೋಗದಲ್ಲಿ ನಡೆದ ನಿತ್ಯ ಕಲ್ಯಾಣ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ವಶೀಕರಣ (ಸಮ್ಮೋಹನ) ಸಾಧ್ಯವೇ? ವಿಷಯ ಚಿಂತನ ಮಾಡಿದ ಶ್ರೀಗಳು, ಮೌಢ್ಯಕ್ಕೆ ಒಳಗಾಗುವವರು ಬಹಳ ಮುಗ್ಧರಿರುತ್ತಾರೆ. ಮೌಢ್ಯಕ್ಕೆ ತಳ್ಳುವವರು ಮುಗ್ಧರಲ್ಲ. ವಶೀಕರಣ ಮುಗ್ಧರ ವಿದ್ಯೆಯಲ್ಲ, ಇಲ್ಲಿ ಪ್ರಬುದ್ಧರು ಕೆಲಸ ಮಾಡುತ್ತಾರೆ. ಬೌದ್ಧಿಕತೆಯಲ್ಲಿ ನಿಪುಣರಾದವರು ಇವರು. ವಶೀಕರಣ ಎಂದರೆ ವಶಪಡಿಸಿಕೊಳ್ಳುವುದು. ಸಮ್ಮೋಹನಗೊಳಿಸುವುದು. ವಶಪಡಿಸಿಕೊಂಡವರನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದು. ಇದರಿಂದ ಯಾರಿಗೆ ಪ್ರಯೋಜನವಿದೆ. ವಶೀಕರಣಕ್ಕೆ ಒಳಗಾದವರಿಗೆ ನಷ್ಟ, ವಶೀಕರಣ ಮಾಡುವವರಿಗೆ ಲಾಭವಾಗುತ್ತದೆ. ಆದರೆ ಇದು ಲಾಭದ ವಿದ್ಯೆ ಅಲ್ಲ. ಇದು ಭಂಡರ ವಿದ್ಯೆ. ಇದರಿಂದ ಅನುಭವ ಬಲ ಮತ್ತು ಅಧ್ಯಯನ ಬಲ ಸಿಕ್ಕುವುದಿಲ್ಲ ಎಂದರು.

ನಿತ್ಯ ಸಮಾಜಮುಖಿಯಾಗಿ ಅಂತರ್ಮುಖಿಯಾಗಿ ಅಧ್ಯಯನಮುಖಿಯಾಗಿ ಇರುವವರು ವಶೀಕರಣ ವಿದ್ಯೆಗೆ ಒಳಗಾಗುವುದಿಲ್ಲ. ದುರ್ಬಲ ವ್ಯಕ್ತಿತ್ವದವರು ಮಾತ್ರ ವಶೀಕರಣಕ್ಕೆ ಒಳಗಾಗುತ್ತಾರೆ. ಜನ್ಮಾಂತರ ಅನ್ನುವುದೇ ಅಪಾಯಕಾರಿ. ಕೆಲವರು ಅವತಾರದ ಪರಿಕಲ್ಪನೆಯಲ್ಲಿ ಇರುತ್ತಾರೆ. ಪ್ರಬಲ ವ್ಯಕ್ತಿತ್ವವನ್ನು ಹೊಂದಿದವರನ್ನು ವಶೀಕರಣ ಮಾಡಲು ಸಾಧ್ಯವಾಗುವುದಿಲ್ಲ. ಕೆಲವರು ಮುಗ್ಧತೆಯನ್ನು ಬಳಸಿಕೊಂಡು ಮೋಸ ಮಾಡುತ್ತಾರೆ. ವಶೀಕರಣ ಮಾಡುವವರಿಗೆ ಬುದ್ಧಿವಂತರ ವಿಚಾರವಂತರ ಪ್ರಜ್ಞಾವಂತರ ಮೇಲೆ ಮಾಡಲು ಆಗುವುದಿಲ್ಲ. ಹಾಗಾಗಿ ವಶೀಕರಣ ಬಲ್ಲವರು ಮುಗ್ಧರನ್ನು ಮಾತ್ರ ಬಳಸಿಕೊಳ್ಳುತ್ತಾರೆ. ಇದು ಹುಸಿತನದ ವಿದ್ಯೆ. ಇದರ ಮೇಲೆ ಗಟ್ಟಿ ಜೀವನ ಕಟ್ಟಿಕೊಳ್ಳಲು ಸಾಧ್ಯವಾಗುವುದಿಲ್ಲ ಹುಸಿ ವಿದ್ಯೆಗಳನ್ನು ನಂಬಬಾರದು. ಬೌದ್ಧಿಕವಾಗಿ ಬಲಾಢ್ಯರಿದ್ದರೆ ಯಾವ ವಶೀಕರಣವು ಕೆಲಸ ಮಾಡುವುದಿಲ್ಲ. ಯಾರ ಬದುಕಿನಲ್ಲಿ ಬೌದ್ಧಿಕ ದಿವಾಳಿತನ ಆಗುತ್ತದೆಯೋ ಅವರು ಹುಸಿ ವಿದ್ಯೆಯನ್ನು ನಂಬುತ್ತಾರೆ ಎಂದು ತಿಳಿಸಿದರು.

ಸಮ್ಮುಖ ವಹಿಸಿದ್ದ ಬ್ಯಾಡಗಿ ವಿರಕ್ತಮಠದ ಶ್ರೀ ಚೆನ್ನಬಸವ ಸ್ವಾಮಿಗಳು ಮಾತನಾಡಿ, ಇಂದಿನ ದಿನಮಾನಗಳಲ್ಲಿ ವಶೀಕರಣದ ಹಾವಳಿ ಜಾಸ್ತಿಯಾಗಿದೆ. ಮಾನಸಿಕ ಅಸ್ವಸ್ಥರು ಇಂತಹ ಸ್ಥಳಗಳಿಗೆ ಹೋಗುತ್ತಾರೆ. ಯಾವುದೊ ಭ್ರಮೆಗೆ ಒಳಗಾದಾಗ ಮಾಂತ್ರಿಕರನ್ನು ಹುಡುಕಿಕೊಂಡು ಹೋಗುತ್ತಾರೆ. ನಾವು ತಿಳಿಯಬೇಕಾದುದನ್ನು ತಿಳಿಯುತ್ತಿಲ್ಲ. ಸಮಾಜದಲ್ಲಿ ಬದಲಾವಣೆ ತರಬೇಕೆಂಬ ಕಾರಣದಿಂದ ಮುರುಘಾ ಶರಣರು ಅನೇಕ ಕಾರ್ಯಕ್ರಮಗಳ ಮೂಲಕ ಪ್ರಯತ್ನಿಸುತ್ತಿದ್ದಾರೆ. ಮಾಂತ್ರಿಕರ ಬೆನ್ನತ್ತಬಾರದು. 12ನೇ ಶತಮಾನದ ಶರಣರು ಶಿವಯೋಗದ ಮೂಲಕ ಜ್ಞಾನದ ವಶೀಕರಣ ಮಾಡುತ್ತಿದ್ದರು ಎಂದು ತಿಳಿಸಿದರು.

ಲಿಂಗಾಯತ ಹೇಮರೆಡ್ಡಿ ಮಲ್ಲಮ್ಮ ಸಮಾಜದ ಮಹಿಳಾ ವಿಭಾಗದ ಅಧ್ಯಕ್ಷೆ ಡಾ. ಶೀತಲ್ ಪ್ರಶಾಂತ್ ಮಾತನಾಡಿ, ವಶೀಕರಣ ಎಂದರೆ ನಿಯಂತ್ರಣ. ಮನಸನ್ನು ಸೆಳೆಯುವುದು. ಸಂಶಯದ ನೆರಳಲ್ಲಿ ಬದುಕುವವರು ಬೇಗನೆ ವಶೀಕರಣಕ್ಕೆ ಒಳಗಾಗುತ್ತಾರೆ. ವಶೀಕರಣ ಎಂದರೆ ಮನಃಪರಿವರ್ತನೆ. ಸಾಧ್ವಿಯಾದ ಹೇಮರೆಡ್ಡಿ ಮಲ್ಲಮ್ಮ ಜನರನ್ನು ಮನಃಪರಿವರ್ತನೆಗೊಳಿಸಿದರು. ಸುಸಂಸ್ಕೃತ ಸಮಾಜದ ನಿರ್ಮಾಣ ಅಗತ್ಯವಾಗಿದೆ. ಮಾನಸಿಕ ಒತ್ತಡ, ಉನ್ಮಾದ ಮೊದಲಾದವುಗಳಿಂದ ಹೊರಬರಬೇಕೆಂದರು.

ಬಸವೇಶ್ವರ ಆಸ್ಪತ್ರೆಯ ವೈದ್ಯ ಡಾ. ಗೋಪಾಲ್‌ದಾಸ್ ಮಾತನಾಡಿ, ನಮ್ಮಲ್ಲಿ ಹಲವು ರೀತಿಯ ನಂಬಿಕೆಗಳು ಜಾತ್ಯತೀತವಾಗಿ ಬಂದಿವೆ. ಅವುಗಳು ಮಾಟ, ಮಂತ್ರ, ಭಾನಾಮತಿಯಾಗಿ ರೂಪುಗೊಂಡಿವೆ. ಸಮ್ಮೋಹನ ಆಕರ್ಷಣೆ. ವಶೀಕರಣ ಎಂದರೆ ಮನಸ್ಸನ್ನು ಸೆಳೆಯುವುದು. ಜಾಗೃತಾವಸ್ಥೆ, ಸುನಿದ್ರೆ, ಸ್ವಪ್ನಾವಸ್ಥೆ ಮನಸ್ಸು ಈ ಮೂರು ರೀತಿಯಲ್ಲಿರುತ್ತದೆ. ನಾವು ನೋಡುವ ದೃಷ್ಟಿಕೋನದ ಮೇಲೆ ನಮ್ಮ ಸ್ಥಿತಿ ನಿಂತಿರುತ್ತದೆ. ವಶೀಕರಣ ಮಾಡುವ ವ್ಯಕ್ತಿ ನಮಗೆ ಗೊತ್ತಾಗದಂತೆ ಕರೆದುಕೊಂಡು ಹೋಗುತ್ತಾರೆ. ಶೇ. 10ರಷ್ಟು ಜನ ಬಹುಬೇಗ ವಶೀಕರಣಕ್ಕೆ ಒಳಗಾಗುತ್ತಾರೆ. ವಶೀಕರಣ ಎನ್ನುವುದೇ ಹಾಸ್ಯಾಸ್ಪದ. ವಶೀಕರಣದಿಂದ ಹೊರಬರುವುದು ತರ್ಕದಿಂದ ಮಾತ್ರ ಸಾಧ್ಯ. ಆರೋಗ್ಯಕರ ಮನಸ್ಥಿತಿ ಇದ್ದರೆ ವಶೀಕರಣಕ್ಕೆ ಒಳಗಾಗುವುದಿಲ್ಲವೆಂದರು.

ಕಾರ್ಯಕ್ರಮದ ಪ್ರಾಯೋಜಕತ್ವ ವಹಿಸಿಕೊಂಡಿದ್ದ ಲಿಂಗಾಯತ ಹೇಮರೆಡ್ಡಿ ಮಲ್ಲಮ್ಮ ಸಮಾಜದ ಅಧ್ಯಕ್ಷ ಚಿದಾನಂದಪ್ಪ, ನಿವೃತ್ತ ಕೃಷಿ ಅಧಿಕಾರಿ ಆರ್.ಡಿ. ತಿಪ್ಪೇಸ್ವಾಮಿ ವೇದಿಕೆಯಲ್ಲಿದ್ದರು.

ಜಮುರಾ ಕಲಾವಿದರು ಪ್ರಾರ್ಥಿಸಿದರು. ಕೆ.ಪಿ.ಬಸವರಾಜು ಸ್ವಾಗತಿಸಿದರು. ರವೀಂದ್ರ ನಿರೂಪಿಸಿದರು.




